ಓ ಎಸ್ 128/2020 ಡಿ.ಡಬ್ಲೂಃ 1

ಓ.ಎಸ್ 83/2021

**ಸಾಕ್ಷಿಯನ್ನು ದಿಃ 02.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಓ.ಎಸ್ 83/2021 ರಲ್ಲಿನ 3 ನೇ ಪ್ರತಿವಾದಿ ಪರ ಶ್ರೀ ಎಂ.ಎನ್.ಎಲ್ ವಕೀಲರಿಂದಃ-**

ನಿಡಿ.24 ರ ಎ.ಸಿ ರವರಿಗೆ ಕೊಟ್ಟಂತಹ ಅರ್ಜಿಯಲ್ಲಿ ಸ್ವಯಾರ್ಜಿತ ಆಸ್ತಿಯನ್ನು ದಾನ ಮಾಡಿದ ಬಗ್ಗೆ ಪಾರ್ವತಮ್ಮ ನವರು ನಮೂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಅದನ್ನು ನಮ್ಮ ತಂದೆ ತೆಗೆದುಕೊಟ್ಟಿದ್ದು ಎನ್ನುತ್ತಾರೆ. ಅದರಲ್ಲಿ ಅರಿಶಿಣ ಕುಂಕುಮಕ್ಕೆಂದು ಹಣ ಕೊಟ್ಟಿದ್ದರಿಂದ ಸರ್ವೆ ನಂ. 234/1 ಎ 2 ನಲ್ಲಿ 3 ಎಕರೆ 39 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. 2015 ರಲ್ಲೆ ತಾಯಿ ಪಾರ್ವತಮ್ಮ ನವರು ಸುಮೇಶ್ ರವರ ಹೆಸರಿಗೆ ದಾನ ಪತ್ರ ಬರೆದ ವಿಷಯ ಗೊತ್ತಿತ್ತು ಎಂದರೆ ಸರಿಯಲ್ಲ. ಹಾಗೆ ದಾನ ಬರೆದ 17 ಗುಂಟೆಯನ್ನು ಕೈಗಾರಿಕೆಯ ಉದ್ದೇಶಕ್ಕಾಗಿ ಮತ್ತು 17 ಗುಂಟೆ ವಾಣಿಜ್ಯ ಉದ್ಯಮಕ್ಕೆ ಅನ್ಯಕ್ರಾಂತ ಮಾಡಿಸಿದ್ದರು ಎಂದರೆ ಸರಿಯಲ್ಲ. ಅದರಂತೆ ವಾಣಿಜ್ಯ ಮತ್ತು ಕೈಗಾರಿಕೆಯ ಉದ್ದೇಶದಿಂದ ಮಳಿಗೆ ಕಟ್ಟಿರುವುದು ಅಲ್ಲಿ ಇದೆ ಎಂದರೆ ಸರಿ. 2015 ರಿಂದಲೂ ಅವರೆ ಸದರಿ ಜಮೀನಿನ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನ ಮೇಲೆ 44 ಲಕ್ಷ ರೂ.ಗಳ ಸಾಲವನ್ನು ಬ್ಯಾಂಕ್ ನಿಂದ ಪಡೆದು ಅದನ್ನು ಅಭಿವೃದ್ದಿ ಪಡಿಸಿ ಪುನಃ ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ದಿಃ 16.01.2018 ರಂದು ಸರ್ವೆ ನಂ. 234/1 ಎ 2 ರಲ್ಲಿ 17 ಗುಂಟೆಯನ್ನು ವಾಣಿಜ್ಯ ಉದ್ಯಮಕ್ಕೆ ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಾರ್ಖಾನೆಗಾಗಿ ಸದರಿ ಸರ್ವೆ ನಂ. 234/1 ಎ 2 ನಲ್ಲಿ 17 ಗುಂಟೆ ಅನ್ಯಕ್ರಾಂತ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕೈಗಾರಿಕೆ ಮತ್ತು ವಾಣಿಜ್ಯ ಉದ್ಯಮಕ್ಕೆ ಅನ್ಯಕ್ರಾಂತ ಆದ ನಂತರ ನಮೂನೆ -11 ಎ ನ 2 ದಾಖಲೆಗಳು ಆಗಿದ್ದು, ಸದರಿ

ದಾಖಲೆಗಳ ಜರಾಕ್ಸ ಪ್ರತಿಗಳನ್ನು ನೋಡಿ ಗುರುತಿಸಿರುತ್ತಾರೆ. 2015 ರಿಂದಲೂ 3 ನೇ ಪ್ರತಿವಾದಿಯೆ ಟ್ಯಾಕ್ಸ್ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಫ್ಲೋರ್ ಮಿಲ್ ನಡೆಸಲು 3 ನೇ ಪ್ರತಿವಾದಿಗೆ ಹಣಗೋಡು ಗ್ರಾಮ ಪಂಚಾಯಿತಿ ರವರು ಲೈಸನ್ಸ್ ಸಹ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಓ.ಎಸ್ 83/21 ರಲ್ಲಿ ಐಟಂ ನಂ. 1 ಮತ್ತು 2 ರ ಸ್ವತ್ತುಗಳಲ್ಲಿ ನನಗಾಗಲಿ, ನನ್ನ ಸಹೋದರಿಗಾಗಲಿ ಯಾವುದೆ ಹಕ್ಕು, ಅಧಿಕಾರ ಮತ್ತು ಭಾಗಾಂಶ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ಪಾರ್ವತಮ್ಮ ನವರ ಸ್ವಯಾರ್ಜಿತ ಸ್ವತ್ತುಗಳು ಆದ ಕಾರಣ ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.